**ಮೈಸೂರಿನ ಹೆಚ್ಚುವರಿ ಲಘು ವ್ಯವಹಾರಗಳ ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**

**ಎಂ.ಎ.ಸಿ.ಟಿ., ಇವರ ನ್ಯಾಯಾಲಯದಲ್ಲಿ**

**ಓ.ಎಸ್ಃ 753/2006**

| | | |
|---|---|---|
| ಹೆಸರು | ಸುರೇಶ್ | ಡಿ.ಡಬ್ಲ್ಯುಃ 7 |
| ತಂದೆಯ ಹೆಸರು | ಶಿವಣ್ಣ | ಸಾಕ್ಷಿಯನ್ನು ದಿನಾಂಕಃ 09.02.2024 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು |
| ವಯಸ್ಸು | 40 ವರ್ಷ | |
| ಉದ್ಯೋಗ | ರಿಯಲ್ ಎಸ್ಟೇಟ್ ವ್ಯಾಪಾರ | |
| ವಾಸ | ರಮ್ಮನಹಳ್ಳಿ | |

**ಮುಖ್ಯ ವಿಚಾರಣೆಃ 7 ರಿಂದ 12 ಪ್ರತಿವಾದಿ ಪರ ವಕೀಲರಿಂದಃ**

ನ್ಯಾಯಾಲಯದ ಸಮನ್ಸ್ ಮೇರೆಗೆ ಈ ದಿನ ನಾನು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ.

ನನ್ನ ದೊಡ್ಡಪ್ಪ ನಾಗಣ್ಣ ಅಲಿಯಾಸ್ ನಾಗಪ್ಪ ಇವರು ಮೈಸೂರಿನ ತಾಲ್ಲೂಕು ಕಚೇರಿಯಲ್ಲಿ ಬರಹಗಾರರಾಗಿ ಕೆಲಸ ಮಾಡುತ್ತಿದ್ದರು. ಈ ದಾವೆಯಲ್ಲಿ ನನ್ನ ದೊಡ್ಡಪ್ಪ ಯಾವ ಪತ್ರ ಬರೆದಿರುತ್ತಾರೆ ಎಂದು ಗೊತ್ತಿಲ್ಲ. ಅವರ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪತ್ರಬರಹಗಾರರಾದ ನಾಗಪ್ಪ ರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ. 35(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ರಮ್ಮನಹಳ್ಳಿಯಲ್ಲಿ ವಾಸವಾಗಿದ್ದೇನೆ. ಸಾಕ್ಷ್ಯ ನುಡಿಯಲು ನನಗೆ ಕರೀಗೌಡರವರು ಕರೆದುಕೊಂಡು ಬಂದಿರುತ್ತಾರೆ. ನಾಗಪ್ಪ ನನ್ನ ದೊಡ್ಡಪ್ಪ ಎಂದು ತೋರಿಸಲು ಜಮೀನು ದಾಖಲೆ ಇದೆ ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ. ನನ್ನ ದೊಡ್ಡಪ್ಪ ರವರಿಗೆ ನಾಗಣ್ಣ ಮತ್ತು ನಾಗಪ್ಪ ಎಂದು ಎರಡು ಹೆಸರಿನಿಂದ ಕರೆಯುತ್ತಿದ್ದರು. ನಮ್ಮ ಒಟ್ಟು ಕುಟುಂಬದ ವಂಶವೃಕ್ಷ ಇಲ್ಲ. ನಿಡಿ. 35 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾಗಪ್ಪ ರವರ ಸಹಿ ತೋರಿಸಲು ನನ್ನ ಬಳಿ

ದಾಖಲೆ ಇದೆ ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ.

ಸಾಕ್ಷಿಯು ಮುಂದಿನ ದಿನಾಂಕದಂದು ಸದರಿ ದಾಖಲೆಯನ್ನು ಹಾಜರು ಪಡಿಸುತ್ತೇನೆ ಎಂದು ಹೇಳಿದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.

**ಮೈಸೂರಿನ ಹೆಚ್ಚುವರಿ ಲಘು ವ್ಯವಹಾರಗಳ ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**

**ಎಂ.ಎ.ಸಿ.ಟಿ., ಇವರ ನ್ಯಾಯಾಲಯದಲ್ಲಿ**

**ಓ.ಎಸ್ . 753/2006**

| | | |
|---|---|---|
| ಹೆಸರು | ಭಾಗ್ಯ | ಡಿ.ಡಬ್ಲ್ಯು: 8 |
| ಗಂಡನ ಹೆಸರು | ನಾಗರಾಜ | ಸಾಕ್ಷಿಯನ್ನು ದಿನಾಂಕ: 09.02.2024 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು |
| ವಯಸ್ಸು | 45 ವರ್ಷ | |
| ಉದ್ಯೋಗ | ಕೂಲಿ | |
| ವಾಸ | ಯಾಂದಹಳ್ಳಿ | |

**ಮುಖ್ಯ ವಿಚಾರಣೆ: 7 ರಿಂದ 12 ಪ್ರತಿವಾದಿ ಪರ ವಕೀಲರಿಂದ:**

ನ್ಯಾಯಾಲಯದ ಸಮನ್ಸ್ ಮೇರೆಗೆ ಈ ದಿನ ನಾನು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ.

ನನ್ನ ತಂದೆ ಶಿವನಂಜಪ್ಪ ಊರ ಗೌಡರಾಗಿದ್ದು ಪಂಚಾಯಿತಿ ಮಾಡಲು ಹೋಗುತ್ತಿದ್ದರು. ನನ್ನ ತಂದೆಯ ಸಹಿ ನೋಡಿದರೆ ಗುರುತಿಸುತ್ತೇನೆ. ಬೇರೆ ಯಾವ ವಿಚಾರವು ಗೊತ್ತಿರುವುದಿಲ್ಲ. ನಿಡಿ. 35 ರಲ್ಲಿರುವ ಶಿವನಂಜಪ್ಪ ರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನು ನಿಡಿ. 35(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು:**

ಸಮಯಾವಕಾಶ ಕೋರಿದ್ದು ನೀಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.

**<u>ಮೈಸೂರಿನ ಹೆಚ್ಚುವರಿ ಲಘು ವ್ಯವಹಾರಗಳ ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು</u>**

**<u>ಎಂ.ಎ.ಸಿ.ಟಿ., ಇವರ ನ್ಯಾಯಾಲಯದಲ್ಲಿ</u>**

## <u>ಓ.ಎಸ್ . 753/2006</u>

| | | |
|---|---|---|
| ಹೆಸರು | ಎನ್ ಕುಮಾರ್ | ಡಿ.ಡಬ್ಲ್ಯು: 9 |
| ಗಂಡನ ಹೆಸರು | ನಿಂಗೇಗೌಡ | ಸಾಕ್ಷಿಯನ್ನು ದಿನಾಂಕಃ 09.02.2024 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು |
| ವಯಸ್ಸು | 45 ವರ್ಷ | |
| ಉದ್ಯೋಗ | ವ್ಯಾಪಾರ | |
| ವಾಸ | ಯಾಂದಹಳ್ಳಿ | |

**<u>ಮುಖ್ಯ ವಿಚಾರಣೆಃ 7 ರಿಂದ 12 ಪ್ರತಿವಾದಿ ಪರ ವಕೀಲರಿಂದಃ</u>**

ನ್ಯಾಯಾಲಯದ ಸಮನ್ಸ್ ಮೇರೆಗೆ ಈ ದಿನ ನಾನು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ.

ಕರೀಗೌಡರವರು ಸಾಕ್ಷಿ ನುಡಿಯಲು ಬನ್ನಿ ಎಂದು ಹೇಳಿದ ಮೇರೆಗೆ ಬಂದಿರುತ್ತೇನೆ. ನನ್ನ ತಾಯಿ ದೇವಮ್ಮ ಪತ್ರಕ್ಕೆ ಹೆಬ್ಬೆಟ್ಟು ಗುರುತು ಹಾಕಿರುತ್ತಾರೆ. ನನ್ನ ತಾಯಿ ತೀರಿಹೋಗಿ ಏಳು ತಿಂಗಳು ಆಗಿರುತ್ತದೆ.

**<u>ಪಾಟೀ ಸವಾಲುಃ</u>**

ಸಮಯಾವಕಾಶ ಕೋರಿದ್ದು ನೀಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/–

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.